ಪ್ರಧಾನ  ಸಿವಿಲ್ ಜಡ್ಜ ಮತ್ತು ಜೆ ಎಮ್ ಎಪ್ ಸಿ, ಅಥಣಿ ಇವರ ನ್ಯಾಯಾಲಯದಲ್ಲಿ

ಸ್ಥಳ : ಅಥಣಿ

ಉಪಸ್ಥಿತರು

**ಜಗದೀಶ ಬಿಸೇರೊಟ್ಟಿ**

B.A.L.L.B.(Spl)

ಪ್ರಧಾನ ಸಿವಿಲ್ ಜಡ್ಜ ಮತ್ತು ಜೆ ಎಮ್ ಎಪ್ ಸಿ, ಅಥಣಿ.

ಸಿ.ಸಿ. ನಂ.4737/2020

1) ಕರ್ನಾಟಕ ಸರಕಾರ,
(ಅಥಣಿ  ಪೋಲೀಸ ಠಾಣೆ)

....ಪಿರ್ಯಾದಿ

ಮತ್ತು

1) ಸಂತೋಷ ಜನಾರ್ಧನ ಶಿಂದೆ,
ವಯಸ್ಸುಃ 22 ವರ್ಷ, ಉದ್ಯೋಗಃ ಒಕ್ಕಲುತನ,
ಸಾಃ  ಜಕ್ಕಾರಟ್ಟಿ ತಾಃ ಅಥಣಿ.

2) ಪರಶುರಾಮ ರಾಜಾರಾಮ ಕಾಂಬಳೆ,
ವಯಸ್ಸುಃ 58 ವರ್ಷ, ಉದ್ಯೋಗಃ  ಖಾಸಗಿ ನೌಕರಿ,
ಸಾಃ ಮದಬಾವಿ, ತಾಃ ಅಥಣಿ.
**(ಮೃತಪಟ್ಟಿರುತ್ತಾರೆ)**

3) ಗೋಪಾಲ ಜಿನ್ನು ಶಿಂದೆ,
ವಯಸ್ಸುಃ 25 ವರ್ಷ, ಉದ್ಯೋಗಃ ಒಕ್ಕಲುತನ,
ಸಾಃ  ಜಕ್ಕಾರಟ್ಟಿ ತಾಃ ಅಥಣಿ.

.... ಆರೋಪಿತರು

# ಆರೋಪಣೆ

ನಾನು ಜಗದೀಶ ಬಿಸೇರೊಟ್ಟಿ ಪ್ರಧಾನ ದಿವಾಣಿ ಮತ್ತು ಜೆ ಎಮ್ ಎಫ್ ಸಿ, ನ್ಯಾಯಾಲಯ, ನಿಮ್ಮ ಮೇಲೆ ಈ ಕೆಳಗಿನಂತೆ ಆರೋಪಣೆಗಳನ್ನು ಮಾಡಲಾಗಿದೆ.

1) ದಿನಾಂಕಃ 10-02-2020 ರಂದು ಸಂಜೆ 5-30 ಗಂಟೆ ಸುಮಾರಿಗೆ ಅಥಣಿ ಪೋಲಿಸ ಠಾಣಾ ಹದ್ದಿಯ ಪೈಕಿ, ಮಸರಗುಪ್ಪಿ ಗ್ರಾಮ ಹದ್ದಿ ದರೇಪ್ಪ ಇಂಗಳಗಾವ ಇವರ ಜಮೀನ ಹತ್ತಿರ, ಅಥಣಿ - ಮಸರಗುಪ್ಪಿ ಸಾರ್ವಜನಿಕ ಡಾಂಬರ ರಸ್ತೆಯ ಮೇಲೆ 1 ನೇ

ಆರೋಪಿಯಾದ ನೀವು ವಾಹನದ ಚಾಲನಾ ಪರವಾಣಿಗೆ ಪತ್ರ ಹೊಂದದೇ, ವಿಮೆ ಇಲ್ಲದ ಹಿರೋ ಸ್ಪೆಂಡರ ಕಂಪನಿಯ ಮೋಟಾರ ಸೈಕಲ ನಂಃಕೆಎ-23 ಇಎಸ್-2393 ನೇದ್ದನ್ನು ಮದಬಾವಿ ಕಡೆಯಿಂದ ಅಥಣಿ ಕಡೆಗೆ ಅತೀ ಜೋರಾಗಿ ನಿಷ್ಕಾಳಜಿತನದಿಂದ ಚಲಾಯಿಸಿಕೂಂಡು ಹಾಗೂ ಮೃತ 2 ನೇ ಆರೋಪಿ ಇತನು ಹಿರೋ ಹೊಂಡಾ ಎಚ್.ಎಫ್. ಡಿಲಕ್ಸ ಕಂಪನಿಯ ಮೋಟಾರ ಸೈಕಲ ನಂಃಕೆಎ-23 ಇಬಿ-6501 ನೇದ್ದರ ಮಾಲೀಕರಿದ್ದು, ತನ್ನ ಮೋಟಾರ ಸೈಕಲಕ್ಕೆ ಯಾವುದೇ ವಿಮೆ ಮಾಡಿಸದೇ, ಸದರಿ ಮೋಟಾರ ಸೈಕಲ ಮೇಲೆ ಚಾಸಾ-7 ಬಾಹುಸಾಬ ಧರ್ಮಣ್ಣಾ ಐದನವರ ಇತನಿಗೆ ಕೂಡ್ರಿಸಿಕೊಂಡು ಅಥಣಿ ಕಡೆಯಿಂದ ಮಸರಗುಪ್ಪಿ ಕಡೆಗೆ ಅತೀ ಜೋರಾಗಿ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಹೋಗಿ ಇಬ್ಬರು ಮೋಟಾರ ಸೈಕಲ ಸವಾರರು ತಮ್ಮ ಮೋಟಾರ ಸೈಕಲಗಳನ್ನು ನಿಯಂತ್ರಣ ಮಾಡದೇ ಒಂದಕ್ಕೊಂದು ಮುಖಾಮುಖಿ ಡಿಕ್ಕಿಯಾಗಿ, ಅಪಘಾತ ಮಾಡಿಕೊಂಡು, 1 ನೇ ಆರೋಪಿಯಾದ ನೀವು 2 ನೇ ಆರೋಪಿ ಇವರಿಗೆ ತಲೆಗೆ ಬಾರಿ ಗಾಯಪಡಿಸಿದ್ದರಿಂದ, ಅಥಣಿ ಸರ್ಕಾರಿ ಆಸ್ಪತ್ರೆಯಲ್ಲಿ ಮರಣಹೊಂದಿದ್ದಲ್ಲದೆ, ಚಾಸಾ-7 ರವರಿಗೆ ಕೈಕಾಲುಗಳಿಗೆ ಬಾರಿ ಗಾಯಪಡಿಸಿ, ನಿಮಗೂ ಸಹ ತಲೆಗೆ ಸಾದಾಗಾಯಪಡಿಸಿಕೊಂಡು, ಆ ಮೂಲಕ 1 ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 279, 337, 304(ಎ) ಹಾಗೂ ಮೊಟಾರ ವಾಹನ ಕಾಯ್ದೆ ಕಲಂ 3 ಸಹ ಕಲಂ 181 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತಿರಿ ಎಂದು ಕಂಡು ಬಂದ ಮೇರೆಗೆ ನಿಮ್ಮ ಮೇಲೆ ಸಂಜ್ಞೆಯನ್ನು ತೆಗೆದುಕೊಳ್ಳಲಾಗಿದೆ ಮತ್ತು ಸದರಿ ಆರೋಪಣೆಗಳ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

2) ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 3 ನೇ ಆರೋಪಿಯಾದ ನೀವು ಹಿರೋ ಸ್ಪೆಂಡರ ಕಂಪನಿಯ ಮೋಟಾರ ಸೈಕಲ ನಂಃಕೆಎ-23 ಇಎಸ್-2393 ನೇದ್ದರ ಮಾಲೀಕರಿದ್ದು, ನಿಮ್ಮ ವಾಹನಕ್ಕೆ ವಿಮಾ ಪಾಲಸಿ ಮಾಡಿಸದೇ ಮತ್ತು ಚಾಲನಾ ಪತ್ರ ಹೊಂದದೇ ಇರುವ 1 ನೇ ಆರೋಪಿತನಿಗೆ ಚಲಾಯಿಸಲು ಕೊಟ್ಟು, ಆ ಮೂಲಕ 3 ನೇ ಆರೋಪಿಯಾದ ನೀವು ಮೋಟಾರ ವಾಹನ ಕಾಯ್ದೆ ಕಲಂ 5 ಸಹ ಕಲಂ 180 ಹಾಗೂ 146 ಸಹ ಕಲಂ 196 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ ಎಂದು ಕಂಡು ಬಂದ ಮೇರೆಗೆ ನಿಮ್ಮ ಮೇಲೆ ಸಂಜ್ಞೆಯನ್ನು ತೆಗೆದುಕೊಳ್ಳಲಾಗಿದೆ ಮತ್ತು ಸದರಿ

ಆರೋಪಣೆಗಳ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

[ಈ ಆಪಾದನೆಯನ್ನು ಈ ದಿನ ದಿನಾಂಕ 02.03.2024 ರಂದು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ]

ಅಥಣಿ
ದಿನಾಂಕ : 02.03.2024.

(ಜಗದೀಶ ಬಿಸೇರೊಟ್ಟಿ)
**ಪ್ರಧಾನ ಸಿವಿಲ್ ಜಡ್ಜ ಮತ್ತು ಜೆಎಮಎಫಸಿ, ಅಥಣಿ.**